ಬೆಂಗಳೂರು ನಗರದಲ್ಲಿ ಜವಳಿ ಪಾರ್ಕ್ ಸ್ಥಾಪನೆ

2036 (2458) : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಜನವಸತಿ ಪ್ರದೇಶದಲ್ಲಿನ ನೇಯ್ಗೆ ಮಗ್ಗಗಳನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ?

(ಆ) ಟೆಕ್ಸ್ ಪಾರ್ಕ್, ಅಪಾರಲ್ ಪಾರ್ಕ್ ಮಾದರಿಯಲ್ಲಿಯೇ ಜವಳಿ ಪಾರ್ಕ್‌ನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

(ಇ) ಈ ಜವಳಿ ಪಾರ್ಕ್‌ನಲ್ಲಿ ನೇಯ್ಗೆಗೆ ಬೇಕಾದ ಮೂಲಭೂತ ಸೌಲಭ್ಯಗಳು ನಿರಂತರ ವಿದ್ಯುತ್ ಸೌಲಭ್ಯ, ಕಚ್ಚಾಸಾಮಗ್ರಿಗಳು, ತಾಂತ್ರಿಕ ಸೇವೆ, ಮಾರುಕಟ್ಟೆ ವ್ಯವಸ್ಥೆ ಹಾಗೂ ರಫ್ತು, ಸೌಲಭ್ಯಗಳು ಒಂದೇ ಸೂರಿನಡಿ ದೊರೆಯುವಂತೆ ಸರ್ಕಾರ ವ್ಯವಸ್ಥೆ ಮಾಡುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಇಲ್ಲ

(ಆ) ಜವಳಿ ಪಾರ್ಕ್ ಸ್ಥಾಪನೆ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಭಿಕ್ಷಾಟನೆ ಬಗ್ಗೆ

2038 (2460) : ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು, ಮೈಸೂರು ಮುಂತಾದ ನಗರಗಳಲ್ಲಿ ಭಿಕ್ಷಾಟನೆ ಅತಿಯಾಗಿರುವುದು ನಿಜವಲ್ಲವೆ; ಹಾಗಿದ್ದಲ್ಲಿ ಯಾವ ಯಾವ ವರ್ಗದವರು ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ?

(ಆ) ಈ ಭಿಕ್ಷಾಟನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳು ಯಾವುವು?

(ಇ) ಬೆಂಗಳೂರಿ ನಂತರ ಪ್ರಮುಖ ನಗರಗಳಲ್ಲಿ ಭಿಕ್ಷಾಟನೆಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡು ಜೀವನ ಸಾಗಿಸುತ್ತಿರುವ ಕುಷ್ಟ ರೋಗಗಳ ಸಂಖ್ಯೆ ಎಷ್ಟು?

(ಈ) ರಾಜ್ಯದಲ್ಲಿ ನಕಲಿ ಕುಷ್ಟರೋಗ ಪ್ರಮಾಣಪತ್ರ ನೀಡಿ ಸರ್ಕಾರಿ ಸೇವೆಗೆ ಸೇರಿರುವವರ ಸಂಖ್ಯೆ ಎಷ್ಟು; ಇನ್ನು ಎಷ್ಟು ಜನ ನೈಜ ಕುಷ್ಟ ರೋಗಿಗಳನ್ನು ಸರ್ಕಾರ ಸೇವೆಯಲ್ಲಿ ನೇಮಕಾತಿ ಮಾಡಬೇಕಾಗಿರುತ್ತದೆ?